ಇಲ್ಲ! ಕೋಟೆ ಅನ್ನುವುದು ಈಗ ಸಂಕೇತವಲ್ಲ; ಅಪ್ಪಟ ವಾಸ್ತವ ಅನ್ನಿಸತೊಡಗಿತು! 'ಅರಮನೆಯಲ್ಲಿ ಏನು ಬೇಕಾದರೂ ನಡೆಯಬಹುದು' ಎಂಬ ಯಾವುದೋ ಸಂಸ್ಕೃತ ನಾಟಕದ ಸಾಲನ್ನು ಡಿ.ಆರ್. ನಾಗರಾಜ್ ಕೋಟ್ ಮಾಡಿದ್ದು ನೆನಪಾಯಿತು. ಅಷ್ಟರಲ್ಲಿ ತನ್ನ ಮುಖ ಮಾತ್ರ ಕಾಣುವಷ್ಟು ಪರದೆ ಸರಿಸಿದ ವ್ಯಕ್ತಿ, ಹುಲಗಪ್ಪನತ್ತ ಒಮ್ಮೆ ಅರೆ ಕುತೂಹಲದಿಂದ ನೋಡಿ 'ಓ' ಎಂದು ಮತ್ತೆ ಪರದೆ ಸರಿಸಿಕೊಂಡಿತು. 'ಜೀವನ್ ದೇಸಾಯಿ. ನನ್ ಸನ್ನು. ಧಾರವಾಡದಲ್ಲಿ ಹಿಸ್ಟರಿ ಪ್ರೊಫೆಸರ್' ಎಂದು ಹುಲಗಪ್ಪನತ್ತ ನೋಡಿ ನಕ್ಕರು ದೇಸಾಯಿ.

'ಯೆಸ್ಸಾರ್' ಎಂದು ಹುಲಗಪ್ಪ ಕತ್ತು ಹಾಕಿದ. ತಾಸೀಲ್ದಾರ್, ವೈಸ್ ಚಾನ್ಸಲರ್, ಎಜುಕೇಶನ್ ಮಿನಿಸ್ಟರ್ ಎಲ್ಲರಿಗೂ ಫೋನ್ ಮಾಡಿ ನನ್ನ ಮೇಲೆ ಒತ್ತಡ ಹೇರುತ್ತಿರುವವನು ಈ ಜೀವನನೇ ಇರಬೇಕು ಎಂಬ ಅನುಮಾನ ಅವನೊಳಗೆ ಇಣುಕಿತು. ದೇಸಾಯಿ ಮತ್ತೆ ಪತ್ರಿಕೆ ಕೈಗೆತ್ತಿಕೊಳ್ಳುತ್ತಾ, 'ಈ ಲೇಖನ ಬರೆಯೋಕೆ ಯಾವ್ಯಾವ ಪುಸ್ತಕ...' ಅನ್ನುವಷ್ಟರಲ್ಲಿ, 'ಕೊನೇಲಿ ಲಿಸ್ಟೇ ಕೊಟ್ಟಿದೀನಲ್ಲ ಸಾರ್' ಅಂದ ಹುಲಗಪ್ಪ. ದೇಸಾಯರು ಲೇಖನದ ಕೊನೆಯತ್ತ ಕಣ್ಣಾಡಿಸುತ್ತಾ, 'ಇವೆಲ್ಲ ನಾನು ಕೇಳೇ ಇಲ್ವಲ್ಲಪ್ಪ' ಅಂದರು. ಹುಲಗಪ್ಪನಿಗೆ ಏನು ಹೇಳುವುದೆಂದು ತೋಚದೆ, 'ಸಾರ್' ಎಂದು ರಾಗ ಎಳೆಯುತ್ತಾ, 'ನಾನಿನ್ನು ಬರ್ಲಾ ಸಾರ್?' ಅಂದ.

'ಕೂತ್ಕೊಳ್ರೀ' ಎನ್ನುತ್ತಲೇ ದೇಸಾಯಿ ಎದುರಿಗಿದ್ದ ಫೈಲು ತೋರಿಸುತ್ತಾ, 'ಈಗಾಗಲೇ ನನ್ನದು ಹಸ್ತಪ್ರತೀಲಿ ಸಾವಿರ ಪುಟ ಆಗಿದೆ. ಚರಿತ್ರೇನ ಕಾದಂಬರಿ ಮಾಡೋರಿಗೂ, ಮೆಕ್ಯಾನಿಕಲ್ ಆಗಿ ಡಿಟೈಲ್ಸ್ ಜೋಡಿಸಿ ಇತಿಹಾಸ ಬರೆಯೋರಿಗೂ ವ್ಯತ್ಯಾಸ ಇರುತ್ತಲ್ವ...' ಎಂದು ಗೊಣಗುತ್ತಾ ಸುಮ್ಮನಾದರು. ಹುಲಗಪ್ಪ ದೇಸಾಯರನ್ನೇ ನೋಡಿದ. ತಾನು ಕಲ್ಪಿಸಿಕೊಂಡಿದ್ದ ಫ್ಯೂಡಲ್ ಗತ್ತೇನೂ ಅವರ ಮುಖದಲ್ಲಿರಲಿಲ್ಲ. ಇದೀಗ ಆತ ನಿಜಕ್ಕೂ ಸಮಸ್ಯೆಯ ತಲೆಬುಡ ಹುಡುಕುವ ಪ್ರಾಮಾಣಿಕ ಲೇಖಕನಂತೆ ಕಂಡದ್ದರಿಂದ ಹುಲಗಪ್ಪ ಚುರುಕಾದ.

'ಇಬ್ಬರಿಗೂ ಒಂದೇ ಗುರಿ ಇರುತ್ತಲ್ವ ಸಾರ್- ಸತ್ಯಶೋಧನೆ?' ಎಂದ ಹುಲಗಪ್ಪ. ದೇಸಾಯಿ ಕತ್ತು ಹಾಕಿದರು. ತಾನು ಹಿಂದೆಂದೋ ಓದಿದ್ದ ದೇಸಾಯರ 'ನಿರ್ಗಮನ' ಕಾದಂಬರಿಯ ಬಗ್ಗೆ ಸೆಮಿನಾರೊಂದರಲ್ಲಿ ಎದ್ದ ಚರ್ಚೆ ನೆನಪಾಯಿತು. ತೆಂಕಣನಾಡಿನ ಪ್ರಾಂತ್ಯವೊಂದನ್ನು 'ಒಂದು ಹನಿ ರಕ್ತವನ್ನೂ ಚೆಲ್ಲದೆ ವಶಪಡಿಸಿಕೊಂಡೆವು' ಎಂದು ಬ್ರಿಟಿಷ್ ಆಫೀಸರೊಬ್ಬ ಡೈರಿಯಲ್ಲಿ ಬರೆದಿದ್ದ; ಆದರೆ ಅದೇ ಘಟ್ಟವನ್ನು ದೇಸಾಯರು ತಮ್ಮ ಕಾದಂಬರಿಯಲ್ಲಿ 'ಇಡೀ ಊರು ನೆತ್ತರಿನಿಂದ ತೊಯ್ದಿತ್ತು... ಸುಣ್ಣ ಬಳಿದ ಮನೆಮನೆಗಳ ಗೋಡೆಗಳ ಮೇಲೆ ರಕ್ತದ ರಂಗೋಲೆಗಳು ಮೂಡಿದ್ದವು. ಗುಡಿ ಗುಂಡಾರಗಳಲ್ಲಿ ನೆತ್ತರೋಕುಳಿಯಾಟ ನಡೆದಿತ್ತು...' ಮುಂತಾಗಿ ವರ್ಣಿಸಿದ್ದು ಚರಿತ್ರಕಾರರ ಚರ್ಚೆಗೆ ಒಳಗಾಗಿತ್ತು. ಆಗ ದೇಸಾಯರು ಪತ್ರಿಕೆಗಳಲ್ಲಿ, 'ಕಾದಂಬರಿ ಬರೆಯೋರು ಚರಿತ್ರಕಾರರ ಕೋಳೀ ಕೇಳಿ ಸಾಂಬಾರ ಪದಾರ್ಥ ಅರೆಯಬೇಕೇನು?' ಎಂದು ಕಹಿಯಾಗಿ ಪ್ರಶ್ನಿಸಿದ್ದರು. 'ಕಾದಂಬರಿ ಎನ್ನುವುದು ಕಲ್ಪನೆಯ ಕೂಸು. ಇತಿಹಾಸದಲ್ಲಿ ಜರುಗಿರುವ ಪರಾಕ್ರಮಣದ ವಿರುದ್ಧ ದೇಶೀಯರ ಸ್ವಾಭಿಮಾನವನ್ನು ಜಾಗೃತಗೊಳಿಸಲು ಕೊಂಚ ಉತ್ಪ್ರೇಕ್ಷಿಸಿ ಬರೆಯುವುದು ಅನಿವಾರ್ಯವಾಗುತ್ತೆ...' ಎಂದೆಲ್ಲ ಹೇಳಿಕೆ ಕೊಟ್ಟಿದ್ದರು.

ಹುಲಗಪ್ಪ ಹಿಂದೊಮ್ಮೆ ದೇಸಾಯರ ಈ ಮಾತುಗಳನ್ನು ರಿಸರ್ಚ್ ಡೈರಿಯಲ್ಲಿ ಟಿಪ್ಪಣಿ ಮಾಡಿಕೊಂಡಿದ್ದರಿಂದ ಇದೆಲ್ಲ ಚೆನ್ನಾಗಿ ನೆನಪಿತ್ತು. ಈ ಚರ್ಚೆಯನ್ನು ದೇಸಾಯರಿಗೆ ನೆನಪಿಸುತ್ತಾ, 'ಹಂಗಂತ ಯಾರ ಮೇಲಾದರೂ, ಯಾವುದರ ಮೇಲಾದರೂ ಏನು ಬೇಕಾದರೂ ಬರೀಬೌದ ಸಾರ್? ಈಗ ಟಿಪ್ಪೂ ಸುಲ್ತಾನ್, ಸಂಗೊಳ್ಳಿ ರಾಯಣ್ಣ ಎಲ್ಲಾರ ಮೇಲೂ ಕಾಮಾಲೆ ಕಣ್ಣಿನ ಜನ ತಲೆಗೆ ಬಂದಂಗೆ ಬರೀತಿದಾರಲ್ಲ? ಅದಕ್ಕೂ ನೀವು ಬರೆಯೋದಕ್ಕೂ ಏನು ವ್ಯತ್ಯಾಸ?' ಅಂದುಬಿಟ್ಟ. 'ಹಾಗಲ್ಲ ಇವರೇ' ಎಂದು ದೇಸಾಯಿ ಏನೋ ತಡಕುವವರಂತೆ ಸುಮ್ಮನಾದರು. ತನ್ನ ಸಂಶೋಧನೆಗೆ ಉಪಯೋಗವಾಗಬಹುದು ಎಂದು ಹಿಂದೊಮ್ಮೆ ಹತ್ತಾರು ಐತಿಹಾಸಿಕ ಕಾದಂಬರಿ ಓದಿದ್ದ ಹುಲಗಪ್ಪನಿಗೆ ಐತಿಹಾಸಿಕ ಕಾದಂಬರಿಯಲ್ಲಿ ಬರುವ ಕಲ್ಪನೆ, ಸತ್ಯಗಳನ್ನು ಕುರಿತ ಗಂಭೀರ ಪ್ರಶ್ನೆಯನ್ನು ದೇಸಾಯರ ಜೊತೆ ಚರ್ಚಿಸಬೇಕೆನ್ನಿಸಿತು. ಅವನು ಓದಿದ್ದ ಅಂಥ ಕೆಲವು ಕಾದಂಬರಿಗಳ ಭಾಷೆ ಕಂಡು ಮೈ ಪರಚಿಕೊಳ್ಳುವಂತಾಗುತ್ತಿತ್ತು. ಯಾವುದೇ